ಅಕ್ಕು ಗುಟ್ಟು ಬಿಟ್ಟು ಕೊಟ್ಟಿರಲಿಲ್ಲ. ಆದರೂ ಮಾರನೇ ದಿನ ಬೆಳಗ್ಗೆ ಎಲ್ಲವೂ ರಟ್ಟಾಗಿತ್ತು. ಮಾವ, ಅಳಿಯನ ಜೊತೆಗೆ ಅಕ್ಕುವಿನ ಮಾವನೂ ಅಡಿಗೆ ಕೋಣೆಯಲ್ಲಿ ಚಾ ಕುಡಿಯಲು ಮಂದಲಿಗೆಯಲ್ಲಿ ಕುಳಿತಿದ್ದರು. ಕಟ್ಟಿಗೆ ಒಲೆಯಲ್ಲಿ ಬಿಸಿ ಬಿಸಿ ಕೆಂಡದಡ್ಯ ಬೇಯುತ್ತಿತ್ತು. ಎಲ್ಲರ ಎಲೆಗೂ ಮೂಡೆ, ಕೋಳಿ ಗಸಿ ಬಡಿಸಿ ಆಗಿತ್ತು. ಮೂಡೆಯ ತುಂಡೊಂದನ್ನು ಕೋಳಿ ಗಸಿಯಲ್ಲಿ ಮುಳುಗಿಸಿದ ಅಕ್ಕುವಿನ ಗಂಡನ ಬೆರಳಿಗೆ ಯಮಪಾಶದಂತೆ ಕೂದಲೊಂದು ಸುತ್ತಿಕೊಂಡಿತ್ತು. ಏನಾಗಿದೆ ಅಂತ ತಿಳಿಯುವ ಮೊದಲೇ ಕೋಳಿ ಗಸಿಯ ತಟ್ಟೆ ಗಸಿ ಸಮೇತ ಅಕ್ಕುವಿನ ಮುಖಕ್ಕೆ ಬಡಿದಿತ್ತು. ಅದರ ಬೆನ್ನ ಹಿಂದಿನಿಂದಲೇ ದಿಗ್ಗನೆ ಮೇಲೆದ್ದವ ಒಲೆಯಿಂದ ಉರಿಯುವ ಕೊಳ್ಳಿ ತೆಗೆದು ಬಾರಿಸಿದ್ದು ನಡುಬೆನ್ನಿಗೆ. ಅಕ್ಕು ಬುಡ ಕಡಿದ ಬಾಳೆಯಂತೆ ಅಪ್ಪನಿಗೆ ಬಡಿಸಿದ ಬಾಳೆಲೆ ಮೇಲೆ ಧಡಾರನೆ ಬಿದ್ದಿದ್ದಳು. ದೇಯಿ, ಚನಿಯ ಇಬ್ಬರೂ ಈ ಅನಿರೀಕ್ಷಿತಕ್ಕೆ ತಲ್ಲಣಿಸಿ ಬೆಪ್ಪು ಹಿಡಿದಂತೆ ಕುಳಿತಾಗ ಅಕ್ಕುವಿನ ಮಾವ ಮಗನ ಕೈಯ್ಯಿಂದ ಕೊಳ್ಳಿ ಹಿಡಿದು ಎಳೆದಿದ್ದರು. ಅಕ್ಕುವಿನ ಅತ್ತೆ ಅಕ್ಕುವನ್ನು ಎಬ್ಬಿಸುತ್ತಿದ್ದಂತೆ ಪತಿರಾಯ ದಪ ದಪ

